# ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ
# ಗೌರಿಬಿದನೂರು

## ಸಿ.ಸಿ. ಸಂಖ್ಯೆ . 416/2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ್ | ಸಿ.ಡಬ್ಲ್ಯು | : | 04 |
| ತಂದೆ / ಗಂಡನ ಹೆಸರು | : | ಸುಬ್ಬಪ್ಪ | ಪಿ.ಡಬ್ಲ್ಯು | : | 04 |
| ವಯಸ್ಸು | : | 46 ವರ್ಷ | ಪ್ರಮಾಣೀಕರಿಸಿದ ದಿನಾಂಕ | : | 01.07.2026 |
| ವೃತ್ತಿ | : | ವ್ಯವಸಾಯ | | | |
| ವಾಸಸ್ಥಳ | : | ಹೊನ್ನಪ್ಪನಹಳ್ಳಿ | | | |

ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

ಚಾಸಾ 1 ರವರು ನನಗೆ ಪರಿಚಯವಿದ್ದಾರೆ, ಚಾಸಾ 2, ಚಾಸಾ 1 ರವರ ಮಗ ಚಾಸಾ 3 ನಮ್ಮ ಊರಿನವರೆ. ಆರೋಪಿಯು ಸಹ ನಮ್ಮ ಊರಿನವರೆ, ಪರಿಚಯವಿದ್ದಾರೆ.

ಸಾಕ್ಷಿಗೆ ನಿಪಿ 2 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮುಂದುವರೆದು ನಿಪಿ 2 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಪೋಲಿಸರು ಹೇಳಿದಂತೆ ಸಹಿ ಹಾಕಿದ್ದೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೂ ಚಾಸಾ 2 ರವರಿಗೂ ಗಲಾಟೆ ಆದ ಬಗ್ಗೆ ನನಗೆ ಏನು ಗೊತ್ತಿಲ್ಲ.

ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪೂರ್ಣಪ್ರಮಾಣದ ಪಾಟೀ ಸವಾಲಿಗೆ ಒಳಪಡಿಸಲು ಸ.ಸ.ಅ. ರವರು ಅನುಮತಿ ಕೋರಿದ್ದು, ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲು : ಸ.ಸ.ಅ. ರವರಿಂದ

ದಿನಾಂಕ 11.05.2024 ರಂದು 8 ಗಂಟೆಯ ಸಮಯದಲ್ಲಿ ಹೊನ್ನಪ್ಪನಹಳ್ಳಿ ಗ್ರಾಮದ ಶನಿಮಹಾತ್ಮ ದೇವಸ್ಥಾನದ ಮುಂಭಾಗ ಚಾಸಾ 2 ರವರು ನಿಂತ್ತಿದ್ದಾಗ ಆರೋಪಿಯು ಈ ಜಾಗ ನನಗೆ ಸೇರಿದ್ದು ನೀನು ಯಾಕೆ ಇಲ್ಲಿ ನಿಂತಿರುವುದು ಎಂದು ಹೇಳುತ್ತಾ ಕಲ್ಲಿನಿಂದ ಹೊಡೆದಿದ್ದು, ಸದರಿ ಏಟನ್ನು ತಪ್ಪಿಸಿಕೊಳ್ಳಲು ಚಾಸಾ 2 ರವರು ಪಕ್ಕಕ್ಕೆ ತಿರುಗಿದಾಗ ಕಲ್ಲು ಚಾಸಾ 2 ರವರ ತಲೆಯ ಹಿಂಭಾಗಕ್ಕೆ ಬಿದ್ದು ಪೆಟ್ಟಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಚಾಸಾ

2 ರವರನ್ನು  ಕೈಗಳಿಂದ ತಳ್ಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.  ಆರೋಪಿಯು ಚಾಸಾ 2 ರವರಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಚಾಸಾ 2 ರವರನ್ನು ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ.  ಚಿಕಿತ್ಸೆ ನೀಡಿದ ವೈದ್ಯರು ಚಾಸಾ 2 ರವರ ತಲೆಗೆ ಪೆಟ್ಟು ಬಿದ್ದು ರಕ್ತ ಗಡ್ಡೆ ಕಟ್ಟಿದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.  ನಂತರ ನಾನು ಚಾಸಾ 2 ರವರನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ.

ಕೃತ್ಯ ನಡೆದ ಸ್ಥಳದಲ್ಲಿ  ನಾನು ಹಾಜರಿದ್ದು, ಸ್ಥಳ ಪಂಚನಾಮೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.   ಚಾಸಾ 1 ಮತ್ತು 2 ರವರು ಆರೋಪಿತನೊಂದಿಗೆ ರಾಜಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ : ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ

Sd/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.